6

# "ನಿನ್ನ ಆಲಯಾಭಿಮಾನವು"

## (2:12-22)

ದುರಂತದ ವಾರ್ತೆಯ ಕಥೆಗಳು ನಮ್ಮನ್ನು ಆಳಾವಾಗಿ ನೋಯಿಸುತ್ತವೆ ಹಾಗೂ ನಮ್ಮ ಜೀವನದ ಇತರ ಕ್ಷೇತ್ರಗಳ ಮೇಲೆ ಚೆಲ್ಲಿಹೋಗುತ್ತವೆ. ಮೆಚ್ಚಿಕೆಯ ಪ್ರಖ್ಯಾತ ವ್ಯಕ್ತಿಗಳು ಇಲ್ಲವೇ ಗೌರವಾನ್ವಿತ ನಾಯಕರು ಡ್ರಗ್ ಉಪಯೋಗ, ಅನೈತಿಕ ವ್ಯವಹಾರ, ಅನೈತಿಕ ನಡತೆ ಇಲ್ಲವೇ ಮನೆಯ ಹಿಂಸಾಚಾರಗಳೊಂದಿಗೆ ಥಕ್ಕನೇ ಆರೋಪಿತರಾಗುವಾಗ ನಾವು ಆಘಾತಕ್ಕೊಳಪಡುತ್ತೇವೆ. ನಾವು ನಿಜವಾಗಿಯೂ, ಯಾರನ್ನಾದರೂ, ನಮ್ಮ ಸಂಗಾತಿಗಳನ್ನು, ನಮ್ಮ ಮಕ್ಕಳನ್ನು, ನಮ್ಮ ಸಹೋದರರನ್ನು ಇಲ್ಲವೇ ಸಹೋದರಿಯರನ್ನು ಇಲ್ಲವೇ ನಮ್ಮನ್ನೂ ಸಹ ತಿಳಿದಿರುವೆವೋ ಎಂದು ಆಶ್ಚರ್ಯಪಡಲು ಪ್ರಾರಂಭಿಸುತ್ತೇವೆ. ಈ ಕಾರಣದಿಂದ ನಾವು ಚೆನ್ನಾಗಿ ತಿಳಿದುಕೊಳ್ಳಲು ಬಯಸುವ ಜನರೊಂದಿಗೆ, ಭಿನ್ನವಾದ ಪರಿಸ್ಥಿತಿಗಳನ್ನು ನಾವು ಅನುಭವಿಸುವುದು ಮಹತ್ವದ್ದಾಗಿದೆ. ಕೆಲಸ ಮಾಡುತ್ತ ಡೇಟಿಂಗ್ ಮಾಡುತ್ತಿರುವ ಅನೇಕ ಯುನಿವರ್ಸಿಟಿ ವಿದ್ಯಾರ್ಥಿಗಳೊಂದಿಗೆ ನಾನು ಮಾಡುವಂತೆ ನಾನು ಅವರಿಗೆ ಜೀವನದ ಪರಿಸ್ಥಿತಿಗಳಲ್ಲಿಯ ವಿವಿಧತೆಗಳಲ್ಲಿ ನಿರೀಕ್ಷಿತ ಪತಿಯನ್ನು ಇಲ್ಲವೇ ಪತ್ನಿಯನ್ನು ನೋಡಲು ಅವರು ಸಾಕಷ್ಟು ಸಮಯ ನಿರ್ಧರನೆ ಮಾಡುವುದು ಎಷ್ಟು ಮಹತ್ವದ್ದೆಂದು ಅವರ ಜ್ಞಾಪಕಕ್ಕೆ ತರುತ್ತೇನೆ; ಜೀವವು ಚೆನ್ನಾಗಿ ಹೋಗುತ್ತಿರುವಾಗ ಮತ್ತು ಅದು ಹಾಗೆ ಇರದೇ ಹೋಗುವಾಗ ಅವರು ಒಬ್ಬರನ್ನೊಬ್ಬರು ನೋಡುವ ಅಗತ್ಯತೆ ಇರುತ್ತದೆ ಅವರು ವಿಶ್ರಾಂತಿ ತೆಗೆದುಕೊಂಡಾಗ ಮತ್ತು ಅವರು ದಣಿದವರಾದಾಗ ಅವರು ಒಬ್ಬರನ್ನೊಬ್ಬರು ನೋಡುವ ಅವಶ್ಯಕತೆಯಿರುತ್ತದೆ. ಅವರು ಯಶಸ್ಸನ್ನು ಹೊಂದಿದಾಗ ಮತ್ತು ಅವರು ಯಾವುದರಲ್ಲಿಯಾದರೂ ಸೋತು ಹೋದಾಗ ಒಬ್ಬರನ್ನೊಬ್ಬರು ನೋಡುವ ಅಗತ್ಯತೆ ಇರುತ್ತದೆ, ಯಾಕೆಂದರೆ ಅನೇಕ ಭಿನ್ನ ವಾದ ಹಿನ್ನೆಲೆಗಳಲ್ಲಿ ಯಾರನ್ನಾದರೂ ನೋಡುವದರಿಂದ ಆ ವ್ಯಕ್ತಿಯು ನಿಜವಾಗಿಯೂ ಯಾರು ಎಂಬುದನ್ನು ನಾವು ತಿಳಿದುಕೊಳ್ಳುತ್ತೇವೆ.

ಈ ಅಧ್ಯಯನದ ಪಠ್ಯವು, ಯೋಹಾನ 2:12-22, ಯೇಸುವನ್ನು ಇನ್ನೊಂದು ಹಿನ್ನೆಲೆಯಲ್ಲಿ ಗಮನಿಸಲಿಕ್ಕೆ ಬಿಡುತ್ತದೆ. ಈ ಸಮಯದಲ್ಲಿ ಅದು ಹೆಚ್ಚು ವಿಶಾಲವಾದ, ಹೆಚ್ಚು ಭಯ ಹುಟ್ಟಿಸುವ, ಕಾನದಲ್ಲಿಯ ಮದುವೆಯ ದೃಶ್ಯಕ್ಕಿಂತ ಹೆಚ್ಚು ವ್ಯಕ್ತಿ ಸಂಬಂಧವಿಲ್ಲದ ಸ್ಥಳದಲ್ಲಿರುತ್ತದೆ. ಈ ವಾಕ್ಯಭಾಗವು ನಮ್ಮನ್ನು ಯೆರೂಸಲೇಮಿನಲ್ಲಿಯ ದೇವಾಲಯಕ್ಕೆ ಯೆಹೂದಿ ಧರ್ಮದ ಕೇಂದ್ರಕ್ಕೆ ಮತ್ತು ಅನಂತರಲ್ಲಿ ಯೇಸುವು ಶಿಲುಬೆಗೆ ಹಾಕಲ್ಪಡಲು ದಂಡನೆ ಹೊಂದಿದ ಸ್ಥಳಕ್ಕೆ ನಮ್ಮನ್ನು ತೆಗೆದುಕೊಂಡು ಹೋಗುತ್ತದೆ. ಈ ವಿರೋಧಿ ಹಿನ್ನೆಲೆಯಲ್ಲಿ ಯೇಸುವನ್ನು ಗಮನಿಸುವುದು ಮತ್ತು ಆಲಿಸುವುದು, ದೇವರ ಕುಮಾರನಾಗಿರುವನೆಂದು ಹೇಳಿದಾತನ ಇನ್ನೊಂದು ಭಾಗವನ್ನು ನೋಡಲು ನಮ್ಮನ್ನು ಬಿಡುತ್ತದೆ, ಈ ಪಠ್ಯದಲ್ಲಿ ನಾವು ನೋಡು ವಂಥದ್ದು, ನಾವು ಮೊದಲು ತಿಳಿದದ್ದಕ್ಕಿಂತ ಯೇಸುವನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಲು ನಮ್ಮನ್ನು ಬಿಡುತ್ತದೆ.

### ನಾವು ಆತನ ಧೈರ್ಯವನ್ನು ನೋಡುತ್ತೇವೆ (2:12-16ಎ)

ಈ ಘಟನೆಗಳು ಪಸ್ಕ ಹಬ್ಬದ ಸಮಯದಲ್ಲಿ ನಡೆದವು (2:13). ಈ ಯೆಹೂದಿ

ಹಬ್ಬವು ಪ್ರತಿಯೊಬ್ಬ ಯೆಹೂದ್ಯನು ಪ್ರತಿ ವರ್ಷವೂ ಭಾಗವಹಿಸಲು ನಿರೀಕ್ಷಿಸಲ್ಪಟ್ಟ ಮೂರು ಹಬ್ಬಗಳಲ್ಲಿ ಒಂದಾಗಿತ್ತು. ಅದು ಮೋಶೆಯ ಸಮಯದಲ್ಲಿ ಇಸ್ರಾಯೇಲ್ಯರು ಐಗುಪ್ತದಿಂದ ಬಿಡುಗಡೆಯಾದದ್ದರ ಸ್ಮರಣೆಯ ಆಚರಣೆಯಾಗಿತ್ತು ಮತ್ತು ಯೆಹೂದಿ ಜನರಿಗೆ ಅವರು ಹೇಗೆ ಅಸ್ತಿತ್ವಕ್ಕೆ ಬಂದರು ಎಂಬುದನ್ನು ಜ್ಞಾಪಿಸುವದಾಗಿತ್ತು. ಪಸ್ಕ ಹಬ್ಬದ ಅತಿಥಿಗಳು ನಗರಕ್ಕೆ ಬಂದಾಗ ಯೆರೊಸಲೇಮಿನ ಜನ ಸಂಖ್ಯೆಯು ತನ್ನ ಸಾಮಾನ್ಯ ಗಾತ್ರಕ್ಕಿಂತ ಅನೇಕ ಪಟ್ಟು ಹೆಚ್ಚಾಗುತಿತ್ತು, ಜನರ ಗುಂಪುಗಳು ಜನರನ್ನು ಚಕಿತಗೊಳಿಸುತ್ತಿದ್ದವು; ಮತ್ತು ವರ್ಷಗಳು ದಾಟಿ ಹೋದಂತೆ, ಪಸ್ಕ ಹಬ್ಬವು ಬರಲಿಕ್ಕಿದ್ದ ಮೆಸ್ಸೀಯನ ನಿರೀಕ್ಷೆಯು ಎಚ್ಚಿಸಲ್ಪಡುವ ಸಮಯವಾಯಿತು.[1] "ಮೆಸ್ಸೀಯನು ಈ ವರ್ಷ ಬರುವನೋ?" ಎಂದು ಜನರು ಒಬ್ಬರನ್ನೊಬ್ಬರು ಪ್ರಶ್ನಿಸುವರು. ಕೆಲವೊಂದು ಕಾರಣದಿಂದ, ಪಸ್ಕ ಹಬ್ಬದ ಸಮಯದಲ್ಲಿ ಆತನು ಬರುವನೆಂದು ಕಲ್ಪಿಸುವುದು ಸುಲಭವಾಗಿತ್ತು.

ಯೇಸುವು ಯೆರೂಸಲೇಮನ್ನು ತಲುಪಿದಾಗ ಕಂಡು ಕೊಂಡ ದೇವಾಲಯವು ನಿಜವಾಗಿಯೂ ಇಸ್ರಾಯೇಲನ ಚರಿತ್ರೆಯಲ್ಲಿ ಮೂರನೆಯ ದೇವಾಲಯವಾಗಿತ್ತು, ಸೊಲೊಮೋನನಿಂದ ಮತ್ತು ಯೆರುಬ್ಬಾಬೇಲನಿಂದ ಕಟ್ಟಲ್ಪಟ್ಟ ದೇವಾಲಯಗಳ ನಂತರ ಇದು ಒಂದು ಹೆರೋದನ ದೇವಾಲಯವೆಂದು ತಿಳಿಯಲ್ಪಟ್ಟದ್ದಾಗಿತ್ತು. ಇದು ಕಟ್ಟಲ್ಪಡುವುದಕ್ಕೆ ಜವಾಬ್ದಾರನಾಗಿದ್ದ ದೊಡ್ಡ ಹೆರೋದನಿಂದ ತನ್ನ ಹೆಸರನ್ನು ತೆಗೆದು ಕೊಂಡಿತು, ಈ ಸಂದರ್ಭದಲ್ಲಿ ಯೇಸುವು ದೇವಾಲಯವನ್ನು ಪ್ರವೇಶಿಸಿದಾಗ, ಅದು ಆಗಲೇ ನಾಲ್ವತ್ತಾರು ವರ್ಷಗಳಿಂದ ಕಟ್ಟಲ್ಪಡಲಿತ್ತು (2:20) ಮತ್ತು ಇನ್ನು ಮೂವತ್ತೈದು ವರ್ಷಗಳವರೆಗೆ, ಕ್ರಿ.ಶ. 64ರಲ್ಲಿ ಪೂರ್ತಿಗೊಂಡಿರಲಿಲ್ಲ. ದೇವಾಲಯದ ಮೈದಾನಗಳು ನಿಜವಾಗಿಯೂ ವಿಶಾಲವಾದ ಅಂಗಳಗಳ ವಿಶಾಲವಾದ ಕ್ಷೇತ್ರವಾಗಿತ್ತು ಮತ್ತು ಗೋಡೆಗಳು ದೇವಾಲಯಕ್ಕೆ ನಡಿಸುವಂಥವುಗಳಾಗಿದ್ದವು.[2] ದೇವಾಲಯದ ಮೈದಾನಗಳು ಪ್ರವೇಶಿಸುವಾಗ, ಮೊದಲನೆಯ ಅಂಗಳವು ಅನ್ಯಜನರ ಅಂಗಳವಾಗಿತ್ತು. ಈ ಕ್ಷೇತ್ರವನ್ನು ಯಾರಾದರೂ ಪ್ರವೇಶಿಸಬಹುದಿತ್ತು, ಇದನ್ನು ದಾಟಿ ಮಹಿಳೆಯರ ಅಂಗಳವಿತ್ತು, ಅಲ್ಲಿ ಯೆಹೂದ್ಯರು ಮಾತ್ರವೇ ಪ್ರವೇಶಿಸಬಹುದಿತ್ತು. ನಂತರದ ದ್ವಾರವು ಇಸ್ರಾಯೇಲ್ಯರ ಅಂಗಳಕ್ಕೆ ನಡೆಸುತಿತ್ತು, ಅಲ್ಲಿ ಯೆಹೂದಿ ಪುರುಷರು ಮಾತ್ರವೇ ಹೋಗ ಬಹುದಾಗಿತ್ತು. ಅಂತಿಮವಾಗಿ, ಒಂದು ಅಂಗಳವಿತ್ತು ಅಲ್ಲಿ ಯೆಹೂದಿ ಯಾಜಕರಿಗೆ ಮಾತ್ರ ಪ್ರವೇಶವಿತ್ತು. ಇದು "ದೇವಾಲಯ" ಎಂಬ ಪದವನ್ನು ನಾವು ಹೇಳುವಾಗ ನಮ್ಮಲ್ಲಿ ಹೆಚ್ಚಾದವರು ಯೋಚಿಸುವ ಕಟ್ಟಡದ ಕ್ಷೇತ್ರವಾಗಿತ್ತು.

ಅನ್ಯರ ಅಂಗಳವು ದೇವಾಲಯದಲ್ಲಿ ಪ್ರತಿಯೊಬ್ಬರೂ ಹೋಗ ಬಹುದಾದ ಒಂದು ಸ್ಥಳವಾಗಿದ್ದ ಕಾರಣ, ಅದು ವ್ಯಾಪಾರಸ್ಥರು ಮತ್ತು ಹಣವನ್ನು ಬದಲಾಯಿಸುವವರು ಅಂಗಡಿಗಳನ್ನು ಇಟ್ಟುಕೊಳ್ಳುವ ಸ್ಥಳವಾಯಿತು. ದೂರದಿಂದ ಬರುತ್ತಿದ್ದ ಆರಾಧಕರು ಯಜ್ಞವನ್ನು ಅರ್ಪಿಸಲಿಕ್ಕೆ ಒಂದು ಪ್ರಾಣಿಯನ್ನು ಕೊಳ್ಳಬೇಕಾಗಿತ್ತು, ಅದುದರಿಂದ ಕುರಿಗಳನ್ನು, ಪಾರಿವಾಳಗಳನ್ನು ಮತ್ತು ಹಸುಗಳನ್ನು ಮಾರಾಟ ಮಾಡುವ ವ್ಯಾಪಾರ ಅಲ್ಲಿತ್ತು. ಇಪ್ಪತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಪ್ರತಿಯೊಬ್ಬ ಯೆಹೂದಿ ಪುರುಷನು ದೇವಾಲಯಕ್ಕೆ ಕರ ಕೊಡಬೇಕಾಗಿತ್ತು. ಇದರಿಂದ ದೇವಾಲಯದ ನೆಲೆಗಳಲ್ಲಿ ಹಣ ಬದಲಾಯಿಸುವವರಿಗೆ ವ್ಯಾಪಾರದ ಅವಕಾಶವನ್ನು ಒದಗಿಸಲಾಗಿತ್ತು. ಈ ಎಲ್ಲಾ ಚಟುವಟಿಕೆಯು ಬಹುಶಃ ಬಹಳಷ್ಟು ಗದ್ದಲವನ್ನು ಹಾಗೂ ಗಲಿಬಿಲಿಯನ್ನು ದೇವಾಲಯದ ಅಂಗಳದಲ್ಲಿ ಹುಟ್ಟಿಸಿರಬೇಕು, ಆದರೆ ಇದು ಸ್ವಾಭಾವಿಕವಾದದ್ದೆಂದು ಜನರು ಸ್ವೀಕರಿಸಿದರು, ಆಗ ಯೇಸುವು ಬಂದನು.

ಯೇಸುವು ದೇವಾಲಯದೊಳಗೆ ನಡೆದು ಬಂದಾಗ, ಅಲ್ಲಿ ಬೇರೆ ಪ್ರತಿಯೊಬ್ಬರಿಗಿಂತ ಭಿನ್ನವಾಗಿ ನಡೆಯುತ್ತಿರುವದನ್ನು ಆತನು ನೋಡಿದನು. ಯೋಹಾನನು ಹೀಗೆ ಬರೆದಿದ್ದಾನೆ,

> ಹಗ್ಗದಿಂದ ಕೊರಡೆ ಮಾಡಿ ಅದರಿಂದ ಕುರಿ ದನ ಸಹಿತ ಎಲ್ಲರನ್ನು ದೇವಾಲಯದ ಹೊರಕ್ಕೆ ಅಟ್ಟಿ ಚಿನಿವಾರರ ರೊಕ್ಕವನ್ನು ಚೆಲ್ಲಿ ಮೇಜುಗಳನ್ನು ಕೆಡವಿದನು. ಪಾರಿವಾಳ ಮಾರುವವರಿಗೆ - ಇವುಗಳನ್ನು ಇಲ್ಲಿಂದ ತಕ್ಕೊಂಡು ಹೋಗಿರಿ; ನನ್ನ ತಂದೆಯ ಮನೆಯನ್ನು ಸಂತೆ ಮಾಡಬೇಡಿರಿ ಎಂದು ಹೇಳಿದನು (2:15, 16).

ಮತ್ತಾಯ, ಮಾರ್ಕ ಮತ್ತು ಲೂಕರು ದೇವಾಲಯವನ್ನು ಶುದ್ಧೀಕರಿಸಿದ ಕಥೆಯನ್ನು ಹೇಳಿದಾಗ, ಅವರು ಯೇಸುವು ವ್ಯಾಪಾರಸ್ಥರು ದೇವಾಲಯವನ್ನು "ಕಳ್ಳರ ಗವಿಯನ್ನಾಗಿ" ಮಾಡಿದ ರೀತಿಯನ್ನು ವಿರೋಧಿಸಿದನೆಂದು ಸೂಚಿಸಿದರು.[3] ಅಪ್ರಮಾಣಿಕ ವ್ಯವಹಾರದ ಬಗ್ಗೆ ಯೇಸುವು ಕೋಪಗೊಂಡಿದ್ದನು ಎಂದು ತೋರಿಸಿದರು. ಹಾಗಿದ್ದರೂ, ದೇವಾಲಯದಲ್ಲಿ ಯಾವುದೇ ವ್ಯಾಪಾರವು ಇರುವದಕ್ಕೆ ಯೇಸುವು ವಿರೋಧಿಸಿದನೆಂದು ಯೋಹಾನನು ತೋರಿಸಿದನು. ದೇವಾಲಯವು ಒಂದು ಪ್ರಾರ್ಥನೆಯ ಮನೆಯಂತೆ, ಎಲ್ಲಾ ದೇಶಗಳಿಂದ ಜನರು ಬಂದು, ದೇವರನ್ನು ಆರಾಧಿಸುವ ಸ್ಥಳದಂತೆ ರೂಪಿಸಲ್ಪಟ್ಟಿರುವುದು. ಯೇಸುವು ನೋಡಿದ್ದು ಒಂದು ವ್ಯಾಪಾರ ಸ್ಥಳದಂತೆ ಇಲ್ಲವೇ ಆತ್ಮೀಕ ರಿಟ್ರೀಟಗಿಂತ ಹೆಚ್ಚಾಗಿ ಮಾರ್ಕೇಟ್ ಸ್ಥಳದಂತೆ ಕಂಡಿತು. ಆತನು ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟು ಕೊಂಡು, ದೇವಾಲಯದಿಂದ ಹೊರಗೆ ವ್ಯಾಪಾರಸ್ಥರನ್ನು ಪ್ರಾಣಿಗಳನ್ನು ಓಡಿಸಿದ್ದು ಪ್ರಭಾವಶಾಲಿಯಾದದ್ದೂ, ಭಯಪಡಿಸುವಂಥದ್ದೂ ಆಗಿತ್ತು.

ಕೋಪವು ಜೀವನದ ಒಂದು ಮಾರ್ಗದಂತೆ ಯೇಸುವಿನಿಂದಲೂ, ಪೌಲನಿಂದಲೂ ಖಂಡಿಸಲ್ಪಟ್ಟಿತ್ತು.[4] ಆದರೆ ಯೇಸುವು ಕೆಲವು ಸಲ, ಕೋಪವುಳ್ಳವನಾದನು - ಮತ್ತು ಪಾಪ ಮಾಡದೇ ಹಾಗೆ ಮಾಡಲು ಶಕ್ತನಾಗಿದ್ದನು.[5] ಈ ಎರಡು ರೀತಿಯ ಕೋಪಗಳ ಮಧ್ಯದಲ್ಲಿ ಭಿನ್ನತೆ ಯಾವುದು? ಒಂದು ಸಹಜವಾಗಿ ಮಾನವ ಅಲ್ಪತೆ, ಅಭದ್ರತೆ ಇಲ್ಲವೇ ಹತಾಶೆಯಿಂದ ಹುಟ್ಟಿಬರುವ ಕೋಪವಾಗಿದೆ. ಇನ್ನೊಂದು ಕಡೆಯಲ್ಲಿ ದೈವಿಕ ಭಯವು ಇತರರ ಕೃತ್ಯಗಳಿಂದ ಜನರು ದೇವರಿಂದ ನೋಯಿಸಲ್ಪಡುವಾಗ ಇಲ್ಲವೇ ದೂರವಿಡಲ್ಪಡುವಾಗ ಉದ್ಭವಿಸುವ ಕೋಪವಾಗಿರುತ್ತದೆ. ಯೇಸುವು ದೇವಾಲಯದಲ್ಲಿಯ ವ್ಯವಹಾರಗಳು ಜನರನ್ನು ದೇವರಿಂದ ದೂರ ಇಡುವುದನ್ನು ನೋಡಿದನು, ಮತ್ತು ಅದು ಸಹಿಸಲ್ಪಡದ್ದಾಗಿತ್ತು.

ದೇವಾಲಯದ ಬಳಿಯಲ್ಲಿಯ ದೃಶ್ಯದ ಒಂದು ಸರಳ ಅನ್ವಯವು ಆರಾಧನೆಗಾಗಿ ನಾವು ಕೂಡಿ ಬರುವಾಗ ನಾವು ನಮ್ಮ ಸಹೋದರ, ಸಹೋದರಿಯನ್ನು ನಡಿಸಿಕೊಳ್ಳುವ ರೀತಿಗೆ ಸಂಬಂಧಿಸಿರುತ್ತದೆ. ಆರಾಧಿಸುವದಕ್ಕೆ ತೊಂದರೆಯಿರುವ ಅನೇಕ ಜನರನ್ನು ಪ್ರತ್ಯೇಕವಾಗಿ ಮೆಡಿಕಲ್ ಡಾಕ್ಟರ್‌ರನ್ನು ಮತ್ತು ವ್ಯಾಪಾರದ ಒಡೆಯರನ್ನು ತಿಳಿದುಕೊಂಡಿದ್ದೇನೆ. ಆರಾಧನೆಯ ಮೊದಲು ಮತ್ತು ಅನಂತರ ಜನರು ಅವರಿಗೆ ವ್ಯವಹಾರದ ಪ್ರಶ್ನೆಗಳನ್ನು ಕೇಳುವುದರ ಮೇಲೆ ಒತ್ತಾಯ ಮಾಡುತ್ತಾರೆ. ಅವರು "ಪ್ರಾರ್ಥನೆಯ ಮನೆಗೆ" ಬರಲು ಬಯಸುತ್ತಾರೆ, ಆದರೆ "ವ್ಯಾಪಾರದ ಮನೆಯನ್ನು" ಮಾತ್ರ ಕಂಡುಕೊಳ್ಳುತ್ತಾರೆ. ಆತಂಕವಿಲ್ಲದೆ ಪ್ರತಿಯೊಬ್ಬರೂ ಆರಾಧಿಸಲಿಕ್ಕಾಗುವಂತೆ, ಕಾಲಕಾಲಕ್ಕೆ ನಾವೆಲ್ಲರೂ ವ್ಯವಹಾರವನ್ನು ದೇವಾಲಯದ ಹೊರಗೆ ಬಿಡುವುದರ ಬಗ್ಗೆ ಜ್ಞಾಪಕಕ್ಕೆ ತರಲ್ಪಡಬೇಕು.

ನಮ್ಮ ಜೀವಿತಗಳಲ್ಲಿ, ದೇವಾಲಯದಲ್ಲಿ ಯೇಸುವಿನ ನಡತೆಯ ಮುಖ್ಯ ಅನ್ವಯವು, "ಯೇಸುವು ಕೋಪಗೊಳ್ಳುವಂತೆ ಮಾಡುವ ಪರಿಸ್ಥಿತಿಗಳ ಮೇಲೆ ನಾನು ಕೋಪಗೊಳ್ಳುವೆನೋ?" ಎಂದು ನಮ್ಮಷ್ಟಕ್ಕೆ ನಾವೇ ಕೇಳುವದರಿಂದ ಬರುತ್ತದೆ, ಯೇಸುವನ್ನು ಕೋಪ ಗೊಳಿಸದ ವಿಷಯಗಳ ಮೇಲೆ ಕೋಪಗೊಳ್ಳುವ ಮತ್ತು ಆಗ ದೇವಾಲಯವನ್ನು ಶುದ್ಧೀಕರಿಸಲು ಯೇಸುವನ್ನು ನಡಿಸಿದಂಥ ಸಮಸ್ಯೆಗಳ ಬಗ್ಗೆ ಶಾಂತಿಯಿಂದಿರುವ ಶೋಧನೆಯು ನಮಗೆ ಇರುತ್ತದೆ. ಯೇಸುವಿನ ಕೋಪವು ಯೋಗ್ಯವಾದದ್ದೂ, ಸಕಾರಾತ್ಮಕವಾದದ್ದೂ, ಕೇಂದ್ರೀಕರಿಸಲ್ಪಟ್ಟಿದ್ದು ಆಗಿತ್ತು. ಅದು ಯಾವಾಗಲೂ ಆತನ ಪ್ರೀತಿಯಿಂದ ಹೊರ

ಬಂದದ್ದಾಗಿತ್ತು, ಇತರ ಉಪಯೋಗಕ್ಕಾಗಿ ಕಾರ್ಯಮಾಡುವಲ್ಲಿ ಆತನನ್ನು ನಡಿಸುತ್ತದೆ.

ನಮ್ಮಲ್ಲಿ ಹೆಚ್ಚಾದವರಿಗೆ ಕೋಪದ ಸಮಸ್ಯೆಯಿರುತ್ತದೆ; ಕೆಲವರಿಗೆ ಅದು ಬಹಳಷ್ಟು ತಪ್ಪಾದ ರೀತಿಯ ಕೋಪವಾಗಿ ನಮ್ಮ ಜೀವಿತದಲ್ಲಿ ಇರುತ್ತದೆ. ಇತರರಿಗೆ ಅದು ದೈವಿಕ ಕೋಪದ ಇಲ್ಲದಿರುವಿಕೆಯಾಗಿರುತ್ತದೆ, ಉದಾಹರಣೆಗಾಗಿ, ನಮ್ಮ ದೇಶದಲ್ಲಿ ಮತ ಚಲಾಯಿಸುವದರಲ್ಲಿ ನೈತಿಕ ಪತನವಾಗಿರುವದರ ಬಗ್ಗೆ ಸಾಕಷ್ಟು ನೀನು ಕೋಪ ಗೊಳ್ಳುವಿಯೋ? 1990ರಲ್ಲಿ ಯು.ಎಸ್. ನ್ಯಾಶನಲ್ ಚುನಾವಣೆಗಳಲ್ಲಿ, ನೂರರಲ್ಲಿ 90ರಷ್ಟು ಜನ ಅರಿಕೆ ಮಾಡಿದ ಸಲಿಂಗ ರತಿಗಳು ಮತ ಚಲಾಯಿಸಿದರು; ಕೇವಲ ಪ್ರತಿಶತ - 35 ಜನರು ಯೇಸುವನ್ನು ಹಿಂಬಾಲಿಸಿದವರೆಂದು ಅರಿಕೆ ಮಾಡಿದವರು ಮತ ಚಲಾಯಿಸಿದರು. ಅಂದ ಉದಾಸೀನತೆಯು ದೈವಿಕ ಕೋಪಕ್ಕಾಗಿ ಅಗತ್ಯತೆಯನ್ನು ಪ್ರತಿಬಿಂಬಿಸುತ್ತದೆ.

ಕಡೆಗಣಿಸಲ್ಪಟ್ಟ ಮಕ್ಕಳ ಬಗ್ಗೆ ಏನು? ಅವರ ಪರಿಸ್ಥಿತಿಯು ನಿನ್ನ ಹೃದಯವನ್ನು ಮುರಿಯುವುದೋ ಹಾಗು ಅವರಿಗೆ ಯಾವುದಾದರೂ ಸಹಾಯ ಮಾಡುವಂತೆ ನಿನ್ನನ್ನು ಸಾಕಷ್ಟು ಕೋಪಗೊಳ್ಳುವಂತೆ ಮಾಡುವುದೋ? ಜೇಮ್ಸ ಡೊಬ್ಬನ್ ಅವರು ಇತ್ತೀಚೆಗೆ ನಮ್ಮ ಸಂಸ್ಕೃತಿಯಲ್ಲಿಯ ಕೆಲವು ನಿರೀಕ್ಷೆಯ ಪ್ರವೃತ್ತಿಗಳ ಬಗ್ಗೆ ಮಾತಾಡಿದರು. ತಮ್ಮ ತಂದೆ ತಾಯಿಗಳಿಂದ ಕಡೆಗಣಿಸಲ್ಪಟ್ಟದ್ದ ನೋವನ್ನು ಅನುಭವಿಸಿದ್ದರ ಬಗ್ಗೆ ಕೋಪಗೊಂಡ ಅನೇಕ ಯುವಜನರನ್ನು ತಾವು ನೋಡಲು ಪ್ರಾರಂಭಿಸಿದ್ದೇನೆ ಎಂದು ಹೇಳಿದರು. ಅವರು ತಮ್ಮ ಮೊದಲಿನ ಸಂತತಿಯವರಿಗಿಂತ ಹೆಚ್ಚಾಗಿ ವಿವಾಹ ವಿಚ್ಛೇದನದ ವಿರೋಧಿಗಳಾಗಿರುವರು. ಅವರಿಗೆ ಕೋಪವು ಸಕಾರಾತ್ಮಕ ಉದ್ದೇಶವಾಗಿ ಸಹಾಯ ಮಾಡುತ್ತಿರುವುದು.

ದೇಶಗಳ ಮೇಲೆ ಸೈತಾನನ ಬಲವನ್ನು ಕುರಿತು ಏನು? ಯುದ್ಧ, ರೋಗ, ಆಹಾರವಿಲ್ಲದಿರುವುದು ಮತ್ತು ಕೊರತೆಯ ಬಗ್ಗೆ ನೀವು ಕೇಳುವಾಗ, ಹೋಗುವದರಿಂದ ಇಲ್ಲವೇ ಹೋಗುವವರಿಗೆ ಸಹಾಯ ಮಾಡುವದರಿಂದ ಸಹಾಯ ಮಾಡುವದಕ್ಕೆ ಅದು ನಿನ್ನಲ್ಲಿ ಸಾಕಷ್ಟು ಕೋಪವನ್ನೆಬ್ಬಿಸುವುದೋ? ನೀನು ಸುಮ್ಮನೆ ಕುಳಿತುಕೊಂಡು ಲೋಕದೊಂದಿಗೆ ಸೈತಾನನಿಗೆ ಅವನ ಮಾರ್ಗವೇ ಇರುವದನ್ನು ಗಮನಿಸುತ್ತಿರುವಿಯೋ?

ದೇವರು ನಮ್ಮನ್ನು ಕೋಪವುಳ್ಳ ಜನರನ್ನಾಗಿ ಮಾಡಲಿ - ಹೆಚ್ಚು ಅಲ್ಪರನ್ನಾಗಿ ಅಲ್ಲ, ಹೆಚ್ಚು ಸ್ವಾರ್ಥಿಗಳನ್ನಾಗಿ ಅಲ್ಲ, ಇಲ್ಲವೇ ಹೆಚ್ಚು ಹತಾಶರನ್ನಾಗಿ ಅಲ್ಲ, ಆದರೆ ಜಗತ್ತಿನಲ್ಲಿಯ ನೋವಿನ ಬಗ್ಗೆ ಹೆಚ್ಚು ಕೋಪವುಳ್ಳವರನ್ನಾಗಿ ಮಾಡಲಿ. ನಾವು ಪ್ರೀತಿಸುವದಕ್ಕೆ ನಮ್ಮನ್ನು ಸಾಕಷ್ಟು ಕೋಪ ವುಳ್ಳವರನ್ನಾಗಿ ಮಾಡಲಿ.

## ಗುರುತಿಸುವ ಆತನ ವಿವೇಕವನ್ನು ನಾವು ನೋಡುತ್ತೇವೆ (2:16ಬಿ, 17)

ಪಾರ್ಕಿಂಗ್ ಸ್ಥಳಕ್ಕೆ ಹೋಗಿ ಅಲ್ಲಿ ಒಂದು ಕಾರುಶೊಪ್ಪಿಂಗ್ ಕಾರ್ಟನಿಂದ ನೆಗ್ಗಿಸಲ್ಪಟ್ಟಿರುವದನ್ನು ನೋಡುವುದು ಒಂದು ಸಂಗತಿಯಾಗಿರುತ್ತದೆ; ನೆಗ್ಗಿಸಲ್ಪಟ್ಟ ಕಾರು ನನ್ನದಾಗಿರುವಂಥದ್ದು ಸಂಪೂರ್ಣವಾಗಿ ಭಿನ್ನವಾದ ಸಂಗತಿಯಾಗಿರುತ್ತದೆ. ಬೇರೆ ಯವರ ಅಂಗಳದಲ್ಲಿ ಬೀರಿನ ಕ್ಯಾನುಗಳು ಎಸೆಯಲ್ಪಟ್ಟಿದ್ದನ್ನು ನೋಡುವುದು ಒಂದು ಸಂಗತಿಯಾಗಿರುತ್ತದೆ; ಆ ಅಂಗಳವು ನನ್ನದಾಗಿರುವಾಗ ಸಂಪೂರ್ಣವಾಗಿ ಭಿನ್ನವಾದ ಸಂಗತಿಯಾಗಿರುತ್ತದೆ, ಒಂದು ಪಾರ್ಕಿನಲ್ಲಿ ಹಾಳು ಮಾಡಲ್ಪಟ್ಟ ಒಂದು ಬೆಂಚುನ್ನು ನೋಡುವಾಗ ಅದು ನನ್ನನ್ನು ಕೆರಳಿಸುತ್ತದೆ. ಕೆಡಿಸಲ್ಪಟ್ಟ ಆ ಬೆಂಚು ನನ್ನದೆಂದು ತಿಳಿದಾಗ ಇನ್ನೂ ಹೆಚ್ಚು ಕೋಪಗೊಳ್ಳುತ್ತೇನೆ, ನಮ್ಮದಾಗಿರದೇ ಇರುವುದರ ಕಡೆಗೆ ನಾವು ಆಸಕ್ತಿಯನ್ನು ತೆಗೆದು ಕೊಳ್ಳುವುದೇ ಇಲ್ಲ, ಹೀಗಿದ್ದರೂ ನಮ್ಮ ಸ್ವಂತದ್ದಕ್ಕೆ ಆಗುವಂಥದ್ದರ ಕಡೆಗೆ ನಾವು ಗಂಭೀರವಾಗಿ ನೋಡುತ್ತೇವೆ.

ದೇವರ ಆಲಯವು ದುರುಪಯೋಗ ಪಡಿಸುತ್ತಿರುವ ರೀತಿಯನ್ನು ಯೇಸುವು ನೋಡಿ ದಾಗ, ಅದನ್ನು ಬಹಳ ವೈಯಕ್ತಿಕವಾಗಿ ತೆಗೆದುಕೊಂಡನು. ಯೇಸುವು ಅವನ್ನು ಕುರಿತು

"ನನ್ನ ತಂದೆಯ ಮನೆ" (2:16) ಎಂದು ಹೇಳಿದನು. ಅದು ಆತನಿಗೆ ಯೆಹೂದ್ಯರ ದೇವಾಲಯಕ್ಕಿಂತ ಇಲ್ಲವೇ ಯೆರೂಸಲೇಮಿನಲ್ಲಿಯ ಕೇವಲ ಇನ್ನೊಂದು ಬಹಿರಂಗ ಕಟ್ಟಡಕ್ಕಿಂತ ಹೆಚ್ಚಿನದಾಗಿತ್ತು; ಅದು ಆತನ ತಂದೆಯ ಮನೆಯಾಗಿತ್ತು. ಆತನ ಶಿಷ್ಯರು ಕೀರ್ತನೆ 69ರಲ್ಲಿಯ ಒಂದು ವಾಕ್ಯಭಾಗವನ್ನು ಜ್ಞಾಪಿಸಿಕೊಳ್ಳುವಷ್ಟು ಯೇಸುವು ಅಲ್ಲಿ ನಡೆಯುವಂಥದ್ದರಿಂದ ಕ್ಲೇಶಗೊಂಡಿದ್ದನು: "ನಿನ್ನ ಆಲಯಾಭಿಮಾನವು ಬೆಂಕಿಯಂತೆ ನನ್ನನ್ನು ದಹಿಸುತ್ತದೆ" (ವಚನ 9). "ದಹಿಸು" ಎಂಬ ಪದವು "ಕಬಳಿಸು" ಇಲ್ಲವೇ "ತಿಂದು ಹಾಕು" ಎಂಬ ಭಾವನೆಯನ್ನು ಕೊಡುತ್ತದೆ. ದೇವಾಲಯವನ್ನು ಅಪವಿತ್ರಗೊಳಿಸಿದ್ದನ್ನು ಪ್ರಸಿದ್ಧ ಅಮೇರಿಕನ್ ನುಡಿಗಟ್ಟನ್ನು ಉಪಯೋಗಿಸಿ "ಯೇಸುವನ್ನು ಜೀವಸಹಿತ ತಿನ್ನುವುದು" ಎಂದು ಹೇಳಬಹುದು. ಇದು ಯೇಸುವಿಗೆ ಒಂದು ಬಹಿರಂಗ ಸ್ಥಳಕ್ಕಿಂತ ಹೆಚ್ಚಾಗಿತ್ತು, ಅದು ಆತನ ತಂದೆಯ ಮನೆಯಾಗಿತ್ತು.

ದೇವಾಲಯಕ್ಕೆ ಸಂಭವಿಸಿದ್ದನ್ನು ಯೇಸುವು ವೈಯಕ್ತಿಕವಾಗಿ ತೆಗೆದುಕೊಂಡ ಸಂಗತಿಯು, ಆತನು ತನ್ನನ್ನು ಯಾರಾಗಿದ್ದಾನೆಂದು ತಿಳಿದುಕೊಂಡದ್ದಕ್ಕೆ ಇನ್ನೊಂದು ಸೂಚನೆಯಾಗಿದೆ. ಆತನು "ನನ್ನ ತಂದೆಯ ಮನೆ" ಎಂದು ಕೂಗಿದಾಗ, ಆತನು ಆ ಮಾತುಗಳಲ್ಲಿ, "ನಾನು ದೇವರ ಕುಮಾರನು" ಎಂದು ಸಹ ಹೇಳಿದನು. ತನ್ನ ಸುವಾರ್ತೆಯ ಅಂತ್ಯದಲ್ಲಿ ಈ ಹೇಳಿಕೆಯನ್ನು ನಾವು ನಂಬಬೇಕೆಂದು ಯೋಹಾನನು ಬಯಸಿದನು (20:31).

"ದೇವರ ಸಂಗತಿಗಳೊಂದಿಗೆ ನಾನು ಎಷ್ಟನ್ನು ಗುರುತಿಸುತ್ತೇನೆ?" "ಈ ಜಗತ್ತನ್ನು ನನ್ನ ತಂದೆಯ ಜಗತ್ತು ಎಂದು ನಾನು ದೃಷ್ಟಿಸುತ್ತೇನೆಯೋ?" "ಸಭೆಯನ್ನು ನಾನು ನನ್ನ ತಂದೆಯ ಸಭೆ ಎಂದು ಪ್ರತಿಪಾದಿಸುತ್ತೇನೋ?" ಸುವಾರ್ತೆಯನ್ನು ಪ್ರಸಾರ ಮಾಡುವ ಕಾರ್ಯವನ್ನು "ನನ್ನ ತಂದೆಯ ಕಾರ್ಯದಂತೆ ನಾನು ಯೋಚಿಸುತ್ತೇನೆಯೋ?" ಎಂಬ ಪ್ರಶ್ನೆಗಳನ್ನು ನೀನೆ ಕೇಳಿಕೋ. ದೇವಾಲಯದಲ್ಲಿ ದೇವರ ಒಂದು ಮಗುವು ತನ್ನ ತಂದೆಗೆ ಮಹತ್ವವಾದದ್ದನ್ನು ಉದಾಸೀನತೆಯಿಂದ ನಡಿಸಿಕೊಳ್ಳಬಾರದೆಂಬುದನ್ನು ಪ್ರದರ್ಶಿಸಿದನು.

## ನಿಯೋಗದ ಬಗ್ಗೆ ಆತನ ವಿವೇಕವನ್ನು ನೋಡುತ್ತೇವೆ (2:18-22)

ದೇವಾಲಯದ ಬಳಿಯಲ್ಲಿ ಅಭಿಮಾನವನ್ನು ಯೇಸುವು ಪ್ರದರ್ಶಿಸಿದ್ದರೊಂದಿಗೆ ಪ್ರತಿಯೊಬ್ಬರೂ ಸಂತೋಷಪಡಲಿಲ್ಲ, ನಿತ್ಯಕ್ರಮಕ್ಕೆ ಆತಂಕವೊಡ್ಡಿ ತಮ್ಮ ವ್ಯವಹಾರವನ್ನು ಕೆಡಿಸಲು ಆತನಿಗೆ ಯಾವ ಅಧಿಕಾರವಿತ್ತು ಎಂದು ಅವರು ಆಶ್ಚರ್ಯಪಟ್ಟರು. ಆ ಕಾರಣದಿಂದ ಅವರು ಯೇಸುವಿಗೆ "ನಿನಗೆ ಇದನ್ನೆಲ್ಲಾ ಮಾಡುವ ಅಧಿಕಾರ ಉಂಟೆಂಬುದಕ್ಕೆ ಏನು ಸೂಚಕ ಕಾರ್ಯವನ್ನು ತೋರಿಸುತ್ತೇ?" (2:18) ಎಂದು ಕೇಳಿದರು. ಯೇಸುವು ಅವರು ಕೇಳಿದಂತೆ ಒಂದು ಅದ್ಭುತಕಾರ್ಯವನ್ನು ಮಾಡದೇ, ಅವರು ದೇವಾಲಯವನ್ನು ಕೆಡವಿದರೆ, ಅದನ್ನು ಮೂರು ದಿನಗಳಲ್ಲಿ ಕಟ್ಟುವೆನು ಎಂದು ಅವರಿಗೆ ಹೇಳಿದನು (2:19). ಅನೇಕ ಟನ್ ಭಾರದ ಕಲ್ಲುಗಳಿಂದ ಕಟ್ಟಲ್ಪಟ್ಟ ಭಾರೀ ಗಾತ್ರದ ಗೋಡೆಗಳು ಸುತ್ತುವರಿಯಲ್ಪಟ್ಟಿದ್ದು, ಅಂಥ ಕಾರ್ಯಮಾಡುವೆನೆಂದು ಹೇಳುವುದು ಒಬ್ಬ ಹುಚ್ಚು ಮನುಷ್ಯನ ಹುಚ್ಚು ಹೇಳಿಕೆಯಂತಿತ್ತು. ಶಿಲುಬೆಯ ಮೇಲೆ "ನಾಶಪಡಿಸಲ್ಪಡುವ" ಮತ್ತು ಮೂರು ದಿನಗಳ ನಂತರ ದೇವರ ಬಲದಿಂದ "ಎಬ್ಬಿಸಲ್ಪಡುವ" ತನ್ನ ದೇಹದ ಬಗ್ಗೆ ಯೇಸುವು ಹೇಳಿದನೆಂದು ಯೋಹಾನನು ವಿವರಿಸಿದನು (2:21).

ಶಿಲುಬೆಗೆ ಹಾಕಲ್ಪಟ್ಟಿದ್ದು ಮತ್ತು ಪುನರುತ್ಥಾನದ ನಂತರ ಶಿಷ್ಯರು ಆತನ ಮಾತುಗಳನ್ನು ಜ್ಞಾಪಿಸಿಕೊಂಡರು. ಪುನರುತ್ಥಾನವು ಎಲ್ಲಕ್ಕಿಂತ ಅತೀ ದೊಡ್ಡ "ಸೂಚಕ ಕಾರ್ಯ"ವಾಯಿತು. ಒಂದು ಸೂಚಕ ಕಾರ್ಯದಂತೆ ಶಿಷ್ಯರು ಪರಿಶುದ್ಧ ಬರಹದಲ್ಲಿ ಮತ್ತು ಯೇಸುವಿನ ಮಾತುಗಳಲ್ಲಿ "ನಂಬಿದಾಗ" ಅದರ ಉದ್ದೇಶಿತ ಪರಿಣಾಮವು ಅದಕ್ಕಿತ್ತು (2:22). ಆ ಸಮಯದಲ್ಲಿ, ಯೇಸುವಿನ ಜೀವನದಲ್ಲಿಯ ಅನೇಕ ಘಟನೆಗಳು ಅವರಿಗೆ ಅರ್ಥವಾಗಲು

ಪ್ರಾರಂಭಿಸಿದವು.

## ಮುಕ್ತಾಯ

ನಾವು ಯೋಹಾನನ ಸುವಾರ್ತೆಯನ್ನು ಓದುವಂತೆ ನಾವು ಕಥೆಯನ್ನು ಪ್ರಾರಂಭಿಸುವದಕ್ಕಿಂತ ಮೊದಲೇ ಅದು ಪುನರುತ್ಥಾನದಲ್ಲಿ ಮುಕ್ತಾಯವಾಗುವದೆಂದು ನಾವು ತಿಳಿಯುವೆವು. ಅದರ ಪರಿಣಾಮವಾಗಿ ನಾವು ಇಡೀ ಸುವಾರ್ತೆಯನ್ನು ಯೇಸುವು ಸತ್ತವರೊಳಗಿಂದ ಎದ್ದು ಬಂದ ನಂತರ ಮಾತ್ರವೇ ಶಿಷ್ಯರಿಗಾದ ದರ್ಶನದ ರೀತಿಯಿಂದ ಓದುವೆವು. ಇಂದು ನಾವು ಓದುವಾಗ, ಮೊದಲನೆಯ ಶತಮಾನದಲ್ಲಿ ಶಿಷ್ಯರು ಮಾಡಿದ ರೀತಿಯಲ್ಲಿಯೇ ನಾವು ಉತ್ತರ ಕೊಡಬೇಕೆಂದು ಆತ್ಮನ ಉದ್ದೇಶವಾಗಿದೆ, ಯೇಸುವು ಕ್ರಿಸ್ತನು, ದೇವರ ಕುಮಾರನು ಎಂದು ನಾವು ನಂಬುವೆವು; ಮತ್ತು ನಂಬುತ್ತ ಆತನ ಹೆಸರಿನಲ್ಲಿ ನಮಗೆ ಜೀವ ಇರುವುದು.

---

ಟಿಪ್ಪಣಿಗಳು

[1]ಐದು ಸಾವಿರ ಜನರಿಗೆ ಅದ್ಭುತಕರವಾಗಿ ಊಟ ಮಾಡಿಸಿದ್ದು (ಯೋಹಾನ 6:1-15) ಮತ್ತು ಯೇಸುಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟಿದ್ದು ಎರಡೂ ಪಸ್ಕ ಹಬ್ಬದ ಉದ್ವೇಗದ ಸಮಯದ ಅವಧಿಯಲ್ಲಿ ಸಂಭವಿಸಿದವು. [2]ದೇವಾಲಯದ ಆಕೃತಿಯನ್ನು ನೋಡಿರಿ. [3]ಮತ್ತಾಯ 21:13; ಮಾರ್ಕ 11:17; ಲೂಕ 19:46. [4]ಮತ್ತಾಯ 5:21-24; ಎಫೆಸ 4:25-32. [5]ಮಾರ್ಕ 3:5; ಇಬ್ರಿಯ 4:15.